# ಉಪತಹಶೀಲ್ದಾರರು, ನಾಡ ಕಾರ್ಯಾಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| ಹೆಚ್.ಶಾಂತಮ್ಮ ತಂದೆ ಲೇಟ್ ಹೆಚ್.ಹೆಗ್ಗಪ್ಪ,<br>ಕೆಂಚಮ್ಮನಹಳ್ಳಿ ಗ್ರಾಮ, ಹಡಗಲಿ ತಾ. | ಮೈಲಪ್ಪ ತಂದೆ ಹೆಗ್ಗಪ್ಪ ಹಳ್ಳಿ ಭೀಮವ್ವ,<br>ಕೆಂಚಮ್ಮನಹಳ್ಳಿ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಮುಸುಕಿನ ಕಲ್ಲಹಳ್ಳಿ | 33/ಎ | 0-98 | ಖುಷ್ಕಿ |

ಪೀಠಿಕೆ :

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಮುಸುಕಿನ ಕಲ್ಲಹಳ್ಳಿ ಗ್ರಾಮದ ಸ.ನಂ.33/ಎ ವಿಸ್ತೀರ್ಣ 0-98 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಕೆಂಚಮ್ಮನಹಳ್ಳಿ ಗ್ರಾಮದ ನಿವಾಸಿಯಾದ ಹೆಚ್.ಶಾಂತಮ್ಮ ತಂದೆ ಲೇಟ್ ಹೆಚ್.ಹೆಗ್ಗಪ್ಪ ಇವರು ದಿನಾಂಕ 28-01-2016 ರಂದು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟಿಸನ್ನು ದಿನಾಂಕ 09-02-2016 ರಂದು ಜಾರಿ ಮಾಡಲಾಗಿ, ನಿಗದಿತ ದಿನಾಂಕದೊಳಗೆ ಅಂದರೆ ದಿನಾಂಕ 08-03-2016 ರಂದು ಕೆಂಚಮ್ಮನಹಳ್ಳಿ ಗ್ರಾಮದ ನಿವಾಸಿಯಾದ ನಿಂಗಮ್ಮ ಗಂಡ ಚಂದ್ರಪ್ಪ ಮತ್ತು ಕರಿಬಸವರಾಜ ತಂದೆ ಚಂದ್ರ ಮೈಲಪ್ಪ ತಂದೆ ಹೆಗ್ಗಪ್ಪ ಹಳ್ಳಿ ಭೀಮವ್ವ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ M.R.ಸಂಖ್ಯೆ 35/2015-16 ರ ಕಡತವು ವಿವಾದಿತ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ದಿನಾಂಕ 6-4--2016 ರಂದು ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಸದರಿ ಪ್ರಕರಣದ ವಿಚಾರಣೆಗೆ ಅರ್ಜಿದಾರರು ಸತತವಾಗಿ ಗೈರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಅರ್ಜಿದಾರಳ ಹಾಗೂ ನಮ್ಮ ಕುಟುಂಬದ ಮಧ್ಯೆ ಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿಗೆ ಸಂಬಂಧಿಸಿದ ದಾವೆಯಿದ್ದು, ಸದರಿ ಪ್ರಕರಣದಲ್ಲಿ ಸಲ್ಲಿಸಿದ ವಾದಪತ್ರದಲ್ಲಿ ವಂಶವೃಕ್ಷದ ಬಗ್ಗೆ ಮಾಹಿತಿಯಿದ್ದು, ಸದರಿ ವಾದಪತ್ರವನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ತಪ್ಪು ವಂಶವೃಕ್ಷವನ್ನು ಸಲ್ಲಿಸಿ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದು ಮೌಖಿಕವಾಗಿ ತಿಳಿಸಿದರು. ಅರ್ಜಿದಾರರು ಸತತವಾಗಿ ಗೈರು ಹಾಜರಾಗಿರುತ್ತಾರೆ. ಅರ್ಜಿದಾರರಿಗೆ ಅಂತಿಮ ನೋಟೀಸನ್ನು ಜಾರಿ ಮಾಡಿದರೂ ಹಾಜರಾಗಿರುವುದಿಲ್ಲ. ಅರ್ಜಿದಾರರಿಗೆ ಸದರಿ ಪ್ರಕರಣದಲ್ಲಿ ಆಸಕ್ತಿ ಇದ್ದಂತೆ ಕಂಡು ಬಂದಿರುವುದಿಲ್ಲ. ಅರ್ಜಿದಾರರ ಮಗನು ಹಾಜರಾಗಿ ಪಹಣಿಯಲ್ಲಿ ಈ ಮೊದಲು ಇರುವ ಹೆಸರುಗಳು ಹಾಗೆ ಮುಂದುವರೆಯಲಿ ಎಂದು ಮೌಖಿಕವಾಗಿ ತಿಳಿಸಿದರು. ತಕರಾರುದಾರರು ಇದಕ್ಕೆ ಒಪ್ಪಿದ್ದು, ತಾವು ಕೂಡ ವಾರಸುದಾರರಾಗಿರುವುದರಿಂದ ಈ ಮೊದಲು ಇದ್ದಂತೆ ಇರಲಿ ಎಂದು ಮೌಖಿಕವಾಗಿ ತಿಳಿಸಿದರು. ಮಾನ್ಯ ಸಿವಿಲ್ ನ್ಯಾಯಾಲಯ, ಹಡಗಲಿಯಲ್ಲಿ ಅಸಲು ದಾವೆ ಸಂಖ್ಯೆ 14/2014 ರಲ್ಲಿ ಪ್ರಕರಣವು ಬಾಕಿಯಿರುವುದರಿಂದ ಈ ಕೆಳಕಂಡಂತೆ ಆದೇಶ

## ಆದೇಶ

ಸಂ/ಕಂ/ಪಹಣಿ/ವಿವಾದ/12/2015-16 ದಿನಾಂಕ 14-09-2016

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ಪ್ರಕಾರ M.R.ಸಂಖ್ಯೆ 35/2015-16 ರ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ. ಉಭಯರು ತಮ್ಮ ಹಕ್ಕನ್ನು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಸಾಭೀತುಪಡಿಸಿಕೊಂಡು ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

(ಸತ್ಯಪ್ರಸಾದ ರಾವ್ ಎಂ.)
ಉಪತಹಶೀಲ್ದಾರರು,
ನಾಡ ಕಾರ್ಯಾಲಯ,
ಇಟ್ಟಿಗಿ

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.